
ಆಸ್ಪತ್ರೆಗೆ ಅಲೆಯಬೇಕು, ಹೀಗಿರಲು ನನ್ನನ್ನು ಕಾಡಿಸುವ ಪೀಡಿಸುವ ಸೊಳ್ಳೆಗಳನ್ನು ಕೊಲ್ಲುವುದರಲ್ಲಿ ತಪ್ಪೇನು ಇಲ್ಲ ಎಂದು ಸಮಾಧಾನವೂ ಇಲ್ಲವಂತಲ್ಲ. ಆದರೆ, ಜೀವಹಾನಿ ಅನ್ನುವುದು ಹತ್ಯೆಗೆ ಸಮಾನ. ಹತ್ಯೆ ಹತ್ಯೆಯೇ. ಆದರೂ ನಮ್ಮನ್ನು ವಿವಿಧ ರೀತಿಯಲ್ಲಿ ದಿನಾಲೂ ಕಾಡಿಸುವ, ಹಿಂಸಿಸುವ ಮನುಷ್ಯರನ್ನು ನಾವು ಕೊಲ್ಲುತ್ತೇವೆಯೇ, ಇಲ್ಲ. ಹಾಗೆ ಮಾಡಿದರೆ ನಾವು ಬದುಕಿರುತ್ತೆವೆಯೇ. ಆದರೆ, ಪಾಪ ಸೊಳ್ಳೆಗಳು, ಕ್ಷುಲ್ಲಕ ಜೀವಿಗಳು. ಅವುಗಳನ್ನು ಮುಲಾಜಿಲ್ಲದೆ ಕೊಂದು ಹಾಕುತ್ತೇವೆ. ಅದಕ್ಕೆ ಯಾವ ಕಾನೂನು ಅಡ್ಡ ಬರುವುದಿಲ್ಲ. ಆದರೆ, ಎಲ್ಲ ಜೀವಿಗಳಲ್ಲಿರುವ ಮುಖ್ಯಪ್ರಾಣ ಒಂದೇ ಅಲ್ಲವೆ. 'ಅಹಿಂಸಾ ಪರಮೋಧರ್ಮ' ಎಂದು ಬೋಧಿಸಿದ ದೇಶ ನಮ್ಮದು. ಆದ್ದರಿಂದ ಯಾವುದೇ ಬಗೆಯ ಜೀವಹಾನಿ ನರಕಕ್ಕೆ ದಾರಿ ಎಂದು ತಿಳಿದೂ ತಿಳಿದು ಹತ್ಯೆ ಮಾಡುತ್ತಿರುವ ಅಳಕು ನನ್ನದು.



ಜಗತ್ತಿನಾದ್ಯಂತ ದಿನಾಲು ಅಸಂಖ್ಯಾತ ಮೀನುಗಾರರು ಅಸಂಖ್ಯಾತ ಮೀನು ಹಿಡಿದು, ಮಾರಿ ಹೊಟ್ಟೆ ಹೊರೆಯುತ್ತಾರಲ್ಲ. ಕಟುಕರು ದಿನಾಲು ಕೋಟಿಕೋಟಿ ದನಕರು, ಪಶುಪಕ್ಷಿಗಳನ್ನು ಸಂಹರಿಸಿ ಮಾರುತ್ತಾರಲ್ಲ. ಅವುಗಳನ್ನು ಕೊಲ್ಲುವವರಿಗೂ, ತಿಂದು ಸಂತೃಪ್ತಿ ಹೊಂದುವವರಿಗೆ ಯಾವುದೇ ಪಾಪಬಾಧೆ ಇರುವುದಿಲ್ಲವೇ ಎಂದು ನನಗೆ ಆಗಾಗ ಅನಿಸುವುದುಂಟು. ಕುರಿ ಕೋಳಿ ಹಂದಿ ಮುಂತಾದವುಗಳನ್ನು ತಿಂದುತೇಗಲೆಂದೇ ಸಾಕುತ್ತಾರಲ್ಲ. ಅವರಿಗೆ ಪಾಪ ಇಲ್ಲವೆ. ಕೊಂದ ಪಾಪನ್ನು ತಿಂದು ಪರಿಹರಿಸಿಕೊಳ್ಳಬೇಕು ಅನ್ನುವ ಮನೋಭಾವದವರೂ ಇದ್ದಾರೆ. ಸೊಳ್ಳೆ ತಿನ್ನುವ ಪದಾರ್ಥವೂ ಅಲ್ಲವಲ್ಲ! ಅವು ಮನೆ ಹಲ್ಲಿಗಳ ಮುಖ್ಯ ಆಹಾರ. ಒಂದನ್ನೊಂದು ತಿಂದು ಬದುಕುವ ಪಶುಪಕ್ಷಿಗಳಿಗೆ,ಇತರ ಜೀವಜಂತುಗಳಿಗೆ ಯಾವ ಪಾಪಬಾಧೆಯೂ ಇಲ್ಲ. ಪಾಪಪ್ರಜ್ಞೆ ಎಂಬುದು ಸ್ವರ್ಗನರಕಗಳಂತೆ ಕೇವಲ ಮನುಷ್ಯನ ಕಪೋಲಕಲ್ಪಿತ ವಿಚಾರ ಆಗಿರಲೂಬಹುದು. ರೌರವ ನರಕ ಅನ್ನುವುದೂ ಹಾಗೆಯೇ.

ಪಾಪ ಮಾಡಿದವರು ನರಕಕ್ಕೆ ಹೋಗುತ್ತಾರೆ, ಈ ಜನ್ಮದಲ್ಲಿ ಮಾಡಿದ ಅಲ್ಲದ ಕೃತ್ಯಗಳಿಗೆ ಸತ್ತ ಮೇಲೆ ದೇವಲೋಕದಲ್ಲಿ ಉತ್ತರಿಸಬೇಕಾಗುತ್ತದೆ, ಅದರಂತೆ ಸ್ವರ್ಗ ನರಕಕ್ಕೆ ಹೋಗಬೇಕಾಗುತ್ತದೆ ಎಂಬಂತಹ ವಿಚಾರಗಳು ಎಲ್ಲ ಧರ್ಮಗಳಲ್ಲೂ ಇವೆ. ಮಾಡಿದ ಪಾಪಕ್ಕೆ ಪರಿಹಾರಗಳೂ ನಮ್ಮ ಹಿಂದೂ ಧರ್ಮದಲ್ಲಿದೆ ಅಲ್ಲವೆ. ಕೆಲವರು ತೀರ್ಥಯಾತ್ರೆ ಮಾಡಿ, ಗುಡಿಗುಂಡಾರ ಸುತ್ತಿ, ಗಂಗಾನದಿಯಲ್ಲಿ ಮಿಂದು ಪಾಪ ಪರಿಹಾರ ಮಾಡಿಕೊಳ್ಳುತ್ತಾರೆ. ಇನ್ನೂ ಕೆಲವರು ದಾನಧರ್ಮ, ವಿವಿಧ ಬಗೆಯ ಪೂಜೆಪುನಸ್ಕಾರ ಮಾಡಿ ಪಾಪ ಪರಿಹಾರ ಎನ್ನುತ್ತಾರೆ. ಕೆರೆಬಾವಿ, ಗುಡಿಗೋಪುರ ಕಟ್ಟಿಸಿದರೆ ಪುಣ್ಯಪ್ರಾಪ್ತಿ ಅನ್ನುವ ವಿಚಾರವೂ ನಮ್ಮಲ್ಲಿ ಇತ್ತು. ಗೋದಾನ, ಭೂದಾನ, ಧನಕನಕ ದಾನ ಇತ್ಯಾದಿ ಕ್ರಿಯೆಗಳು ಈಗಲೂ ಬೇರೆಬೇರೆ ರೂಪದಲ್ಲಿ ಉಂಟು. ಸೊಳ್ಳೆ ಸಾಯಿಸಿದ ಪಾಪಕ್ಕೆ ನಮ್ಮ ಧರ್ಮ ಗ್ರಂಥಗಳಲ್ಲಿ ಏನಾದರು ಪರಿಹಾರ ಇದೆಯೇ ಎಂಬ ಬಗ್ಗೆ ನಾನು ಇನ್ನೂ ವಿಚಾರಿಸಿಲ್ಲ. ನಿಮಗೇನಾದರೂ ಗೊತ್ತಿದ್ದರೆ ತಿಳಿಸಿ. ಸ್ವರ್ಗನರಕಗಳ ಕುರಿತು ಡಿ ವಿ ಜಿ ಯವರು ಕಗ್ಗದಲ್ಲಿ:

'ಮರಣದಿಂ ಮುಂದೇನು? ಪ್ರೇತವೋ॥
ಭೂತವೋ।
ಪರಲೋಕವೋ? ಪುನರ್ಜನ್ಮವೋ? ಆದೇನೋ॥
ತಿರುಗಿ ಬಂದವರಿಲ್ಲ,ವರದಿ ತಂದವರಿಲ್ಲ ।
ಧರೆಯ ಬಾಳ್ವದರಿನೇಂ? ಮಂಕುತಿಮ್ಮ ॥

ಎಂದಿದ್ದಾರೆ. ಸ್ವರ್ಗ ನರಕದ ಕಲ್ಪನೆಯೇ ಅಸ್ಪಷ್ಟವಿರುವಾಗ ಪಾಪಪುಣ್ಯದ ಹಂಗೆಲ್ಲಿ. ಏನೇ ಕುಕೃತ್ಯ ಎಸಗಿದರೂ ಕಾನೂನು ಕ್ರಮದ ಹೊರತು ಬೇರೆನಿಲ್ಲ, ಪಾಪ ಕಾರ್ಯಗಳಿಗಾಗಿ ಅಥವಾ ಕುಕೃತ್ಯಗಳಿಗಾಗಿ ಜೈಲು ಸೇರುವುದೇ ಭೂಲೋಕದಲ್ಲಿಯ ನರಕವಾಗಿರಬಹುದು. ನಮ್ಮ ಸ್ನೇಹಿತರೊಬ್ಬರು ಆಸ್ಪತ್ರೆಗೆ ಹೋಗದೇ ಸಾವು ಬಂದರೆ ಅದೇ ಸ್ವರ್ಗ, ಆಸ್ಪತ್ರೆಗೆ ಹೋಗಿ ಅನುಭವಿಸಿ ಸಾವು ಬಂದರೆ ಅದೇ ನರಕ ಅನ್ನುತ್ತಿದ್ದರು. ಇನ್ನು ಧರ್ಮಕ್ಕಾಗಿ ಮಡಿದರೆ ಅಥವಾ ಯುದ್ಧದಲ್ಲಿ ಮಡಿದರೆ ವೀರಸ್ವರ್ಗ ಎಂಬುದು ಕೂಡ ಪ್ರಚಲಿತವಿತ್ತು. ಅವು ಹೋರಾಡಿ ಸಾಯಲು ಪ್ರಚೋದಿಸುವ ಉನ್ಮಾದಗಳು. ಇಂಥ ಶೌರ್ಯಸಾಹಸಗಳಲ್ಲಿ ಮಡಿದವರಿಗಾಗಿ ನಮ್ಮಲ್ಲಿ